**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>**

**<u>ಸಿ ಸಿ ನಂ.176/2020</u>**

**<u>ಫಿರ್ಯಾದಿದಾರರು :-</u>** ಯಡ್ರಾಮಿ ಪೊಲೀಸ್ ಠಾಣೆ

**: ವಿರುದ್ದ :**

**<u>ಆರೋಪಿತರು:</u>**

1. ಮಾರತಾಂಡಪ್ಪ ತಂದೆ ಶಿವಪ್ಪ ನಾಟೀಕಾರ
ವಃ 65 ವರ್ಷ, ಉಃ ಒಕ್ಕಲುತನ,

2. ಮಲ್ಲೇಶಪ್ಪ ತಂದೆ ಶಿವಪ್ಪ ನಾಟೀಕಾರ
ವಃ 52 ವರ್ಷ, ಉಃ ಒಕ್ಕಲುತನ,

3. ಶಿವಪ್ಪ @ ಶಿವಕುಮಾರ ತಂದೆ ನಿಂಗಪ್ಪ ನಾಟೀಕಾರ
ವಃ 52 ವರ್ಷ, ಉಃ ಒಕ್ಕಲುತನ,

4. ಪರಸಪ್ಪ @ ಪರಪ್ಪ ತಂದೆ ಸುಬ್ಬಣ್ಣ ತಳವಾರ
ವಃ 33 ವರ್ಷ, ಉಃ ಒಕ್ಕಲುತನ,

5. ಯಲ್ಲಪ್ಪ ತಂದೆ ಹಣಮಂತ್ರಾಯ ವಗಡಂಬಳ
ವಃ 33 ವರ್ಷ, ಉಃ ಒಕ್ಕಲುತನ,

**(ಆ-5 ಇವರು ಮೃತ ಹೊಂದಿದ್ದರಿಂದ ಅವರ ವಿರುದ್ದ ಪ್ರಕರಣ ಕೈಬಿಡಲಾಗಿದೆ)**

6. ರಂಗಪ್ಪ @ ರಂಗಣ್ಣ ತಂದೆ ಹಣಮಂತ್ರಾಯ ವಗಡಂಬಳ
ವಃ 28 ವರ್ಷ, ಉಃ ಒಕ್ಕಲುತನ,

**ಆರೋಪಿ 1 ರಿಂದ 6 ಸಾಃ ಮಲ್ಲಾಬಾದ, ತಾಃ ಯಡ್ರಾಮಿ**

7. ಬಂಡಾರಿ @ ಬಂಡಾರೆಪ್ಪ ತಂದೆ ಮಾರತಾಂಡಪ್ಪ ನಾಟೀಕಾರ
ವಃ 41 ವರ್ಷ, ಉಃ ಒಕ್ಕಲುತನ,
ಸಾಃ ಭೋವಿಗಲ್ಲಿ, ಸುರಪೂರ

8. ಗೌರಮ್ಮ ಗಂಡ ಚೌಡಯ್ಯಾ @ ಅಂಬಾರಾಯ
ವಃ 22 ವರ್ಷ, ಉಃ ಕೂಲಿ,
ಸಾಃ ಮಲ್ಲಾಬಾದ, ಹಾಃ ವಃ ಶಿವಣಗಿ

9. ಗಂಗಮ್ಮ ಗಂಡ ಶರಣಪ್ಪ ತಳವಾರ @ ನಾಟೀಕಾರ
ವಃ 47 ವರ್ಷ, ಉಃ ಕೂಲಿ,
ಸಾಃ ಮಲ್ಲಾಬಾದ, ಹಾಃ ವಃ ಪಾಳದಕೇರಿ ಓಣಿ, ಸುರಪೂರ

10. ಚನ್ನಪ್ಪ ತಂದೆ ಶರಣಪ್ಪ ತಳವಾರ @ ನಾಟೀಕಾರ
ವಃ *30* ವರ್ಷ, ಉಃ ಕೂಲಿ,
ಸಾಃ ಮಲ್ಲಾಬಾದ, ಹಾಃ ವಃ ಪಾಳದಕೇರಿ ಓಣಿ, ಸುರಪೂರ

## <u>ದೋಷಾರೋಪಣೆ</u>

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

1. ದಿನಾಂಕ 06-07-2019 ರಂದು ಮದ್ಯಾಹ್ನ 04-00 ಗಂಟೆ ಸುಮಾರಿಗೆ ಯಡ್ರಾಮಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಲ್ಲಾಬಾದ ಗ್ರಾಮದ ಸೀಮಾಂತರದ ಹೊಲ ಸರ್ವೆ ನಂ.72/1, ರಲ್ಲಿ ಚಾಸಾ-1, ಚಾಸಾ-4 ರಿಂದ ಚಾಸಾ-6 ನೆದ್ದವರು ಹೊಲದಲ್ಲಿ ಕಸ ತೆಗೆಯುತ್ತಿದ್ದಾಗ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ಫಿರ್ಯಾದಿದಾರರ ಮೇಲೆ ಹಲ್ಲೆ ಮಾಡುವ ಏಕೊದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 143 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

2. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ದೊಂಬಿ ಮಾಡಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 147 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

3. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಕೈಯಲ್ಲಿ ಮಾರಕಾಸ್ತ್ರಗಳಾದ ಕಲ್ಲು ಮತ್ತು ಬಡಿಗೆಗಳನ್ನು ಹಿಡಿದುಕೊಂಡು ಹೋಗಿ ದೊಂಬಿ ಮಾಡಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 148 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

4. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಹೋಗಿ ಹೊಲ ಸರ್ವೆ ನಂ.72/1 ರಲ್ಲಿ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 447 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

5. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಹೋಗಿ, ಚಾಸಾ-1, 4 ರಿಂದ 6 ಅವರಿಗೆ ಕಾನೂನು ಬಾಹಿರವಾಗಿ ಅಕ್ರಮ ತಡೆಯುಂಟು

ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 341 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

6. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1, ಚಾಸಾ-4 ರಿಂದ ಚಾಸಾ-6 ಇವರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು, ಸಾರ್ವಜನಿಕವಾಗಿ ಅವಮಾನ ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 504 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

7. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, 2ನೇ ಆರೋಪಿತನು ಸಾಕ್ಷಿ ನಂ.1 ನೆದ್ದವರಿಗೆ ಕೈಯಿಂದ ಬೆನ್ನಿನ ಮೇಲೆ ಹೊಡೆದಿದ್ದು, 6ನೇ ಆರೋಪಿತನು ಚಾಸಾ-1 ಅವರಿಗೆ ಕೈಯಿಂದ ಹೂಡೆದು ಕಾಲಿನಿಂದ ಒದಿದ್ದು, 8 ಮತ್ತು 9ನೇ ಆರೋತರು ಚಾಸಾ-1 ಮತ್ತು ಚಾಸಾ-4 ಅವರಿಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದು ಗುಪ್ತಗಾಯಗಳನ್ನು ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 323 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

8. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಆರೋಪಿ ನಂ.1 ನೆದ್ದವನು ಚಾಸಾ-4 ಅವರಿಗೆ ಬಡಿಗೆಯಿಂದ ಎಡತೊಡೆಗೆ ಹೊಡೆದು

ಗುಪ್ತಗಾಯ ಪಡಿಸಿದ್ದು, 3ನೇ ಆರೋಪಿತನು ಬಡಿಗೆಯಿಂದ ಚಾಸಾ-5 ಅವರಿಗೆ ಎಡತೊಡೆಗೆ ಹೊಡೆದು ಗುಪ್ತಗಾಯ ಪಡಿಸಿದ್ದು, ಜಗಳ ಬಿಡಿಸಲು ಹೋದ ಚಾಸಾ-6 ಅವರಿಗೆ 4ನೇ ಆರೋಪಿತನು ಬಡಿಗೆಯಿಂದ ಚಾಸಾ-6 ಅವರ ತಲೆ ಮೇಲೆ ಹೊಡೆದು ರಕ್ತಗಾಯ ಪಡಿಸಿದನು, 10ನೇ ಆರೋಪಿತನು ಕಲ್ಲಿನಿಂದ ಚಾಸಾ-5 ಅವರ ತಲೆಗೆ ಹೊಡೆದು ಗುಪ್ತಗಾಯ ಪಡಿಸಿದನು, 7ನೇ ಆರೋಪಿತನು ಕಲ್ಲಿನಿಂದ ಚಾಸಾ-4 ಅವರ ತಲೆಗೆ ಹೊಡೆದು ಗುಪ್ತಗಾಯ ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 324 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

9. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಆರೋಪಿ ನಂ.2 ನೆದ್ದವನು ಚಾಸಾ-1 ಅವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಕೈ ಹಿಡಿದು ಎಳೆದಾಡಿ ಅವಮಾನ ಪಡಿಸಿರುತ್ತಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 354 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

10. ಮೇಲೆ ಹೇಳಲಾದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ಮತ್ತು 6 ರಿಂದ 10ನೇ ಆರೋಪತರು ಮೃತ ಆರೋಪಿ ನಂ.5 ನೆದ್ದವನ ಜೊತೆ ಸೇರಿಕೊಂಡು ನೀವು ನಿಮ್ಮ ಏಕೋದ್ದೇಶದ ಈಡೇರಿಕೆಗಾಗಿ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1, ಚಾಸಾ-4 ರಿಂದ ಚಾಸಾ-6 ಇವರಿಗೆ ವಿನಾಕಾರಣ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ಅವರಿಗೆ ಹೊಡಿಬಡಿ ಮಾಡಿದ್ದಲ್ಲದ ನಿಮಗೆ ಜೀವ ಸಹಿತ ಬಿಡುವುದಿಲ್ಲ ಖಲಾಸ ಮಾಡುತ್ತೇವೆಂದು ಜೀವ ಬೇದರಿಕೆ ಹಾಕಿರುತ್ತಿರಿ, ಆ ಮೂಲಕ

ಭಾ.ದಂ.ಸಂಹೀತೆ ಕಲಂ 506 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 07-04-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

**<u>ಆರೋಪಿಗಳ ಹೇಳಿಕೆ</u>**

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-1 ಆ-2

ಆ-3 ಆ-4

ಆ-6 ಆ-7

ಆ-8 ಆ-9

ಆ-10

ಪ್ರಶ್ನೆ -2 : ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-1 ಆ-2

ಆ-3 ಆ-4

ಆ-6 ಆ-7

ಆ-8 ಆ-9

ಆ-10

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ 07-04-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.